1993-94ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ:ಘಟಕಗಳಿಗೆ ಔಷಧಿಗಳನ್ನು ಪೂರೈಸಿರುವ ವಿವರ

ಕ್ರಮ ಸಂಖ್ಯೆ	ಸಂಸ್ಥೆಗಳು	ಅನುಧಾನ ಮೌಲ್ಯ ರೂ:	ಔಷಧಿಗಳ ಪೂರೈಕೆಯ ಮೌಲ್ಯ
1.	ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ	45,000-00	44,272-98
2.	ಪ್ರಾಥಮಿಕ ಆರೋಗ್ಯ ಕೇಂದ್ರ ಕಾಗಿನಲ್ಲಿ	30,000-00	20,700-00
3.	" ಸುಣ್ಣದ ಕೊಪ್ಪ	30,000-00	17,726-67
4.	" ಶಿರಾಳ ಕೊಪ್ಪ	30,000-00	13,170-44
5.	" ಚಿಕ್ಕ ಜೋಗಿಹಳ್ಳಿ	30,000-00	22,241-38
6.	" ಸಾಲೂರು	30,000-00	13,254-35
7.	" ಚಿಕ್ಕಜಾಜೂರು	30,000-00	13,105-18
8.	" ಘಟಕ : ಹೋತನಕಟ್ಟೆ	30,000-00	19,147-92
9.	" " ಹಾರಿಗೆ	30,000-00	19,147-92
10.	" " ಹಿತ್ತಾಲೆ	30,000-00	19,147-92
11.	" " ಮರವಳ್ಳಿ	30,000-00	19,147-92
12.	" " ಯಲಗೇರಾ	30,000-00	19,147-92
	ಜಿಲ್ಲಾ ಪರಿಷತ್ತಿನ ವತಿಯಿಂದ ಸರಬರಾಜಾದ ಔಷದಿಗಳ ವಿವರ		
1.	ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ	30,000-00	35,772-00
2.	ಶಿರಾಳಕೊಪ್ಪ	20,000-00	9,155-00
3.	ಚಿಕ್ಕ ಜೋಗಿಹಳ್ಳಿ	20,000-00	4,560-00
4.	ಸುಣ್ಣದ ಕೊಪ್ಪ	20,000-00	16,920-00
5.	ಕಾಗಿನೆಲೆ	20,000-00	5,271-00
6.	ಚಿಕ್ಕ ಜಂಬೂರು	20,000-00	2,304-00

ಹುಕ್ಕೇರಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು

475 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು? ಹಾಗೂ ಅವುಗಳು ಯಾವ ಗ್ರಾಮಗಳಿಗೆ ಮಂಜೂರಾಗಿದೆ.

ಆ) ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆಯೇ?

ಇ) ಇಲ್ಲದೆ ಇದ್ದಲ್ಲಿ ವಿಳಂಬ ಆಗಲು ಕಾರಣವೇನು? ಮತ್ತು ಅವುಗಳನ್ನು ಪ್ರಾರಂಭಿಸಿ ಪೂರ್ತಿ ಗೊಳಿಸಲಾಗುವುದು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹುಕ್ಕೇರಿ ತಾಲ್ಲೂಕಿಗೆ ಒಟ್ಟು 10 ಕೆಳಕಂಡ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ.

1. ಅಮ್ಮಣಗಿ (ಭಾರತ ಸರ್ಕಾರಿ ಮಾದರಿ)
2. ದಡ್ಡಿ (ಭಾರತ ಸರ್ಕಾರಿ ಮಾದರಿ)
3. ಕಣಗಲೆ
4. ಯು.ಖಾನಾಪುರ
5. ಪಾಶ್ಚಾಪುರ
6. ಯಮಧನಮರಡಿ
7. ಇಂಸ್ಲಾಮಪುರ
8. ಉಲ್ಲಳ್ಳಿ
9. ನೇಗಿನಾಳ್
10. ಸಂಕೇಶ್ವರ

ಆ) ಮೇಲ್ಕಂಡ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇ) ಉದ್ಭವಿಸುವುದಿಲ್ಲ.

ಗೇರು ಅಭಿವೃದ್ಧಿ ನಿಗಮಕ್ಕೆ ಅರಣ್ಯ ಭೂಮಿಯ ಹಂಚಿಕೆ

548 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ ಕ್ಷೇತ್ರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಗೇರು ಅಭಿವೃದ್ಧಿ ನಿಗಮಕ್ಕೆ ಹಳೆಯ ಗೇರು ತೋಪಿರುವ ಭೂಮಿ 20 ಸಾವಿರ ಹೆಕ್ಟೇರು ಪ್ರದೇಶವನ್ನು ವಹಿಸಿಕೊಟ್ಟಿದ್ದು ನಿಜವೇ.

ಆ) ಈ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಿ ಆದೇಶವನ್ನು ಉಲ್ಲಂಘಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ ಎಹೆಚ್‌ಎಫ್‌ಎಫ್ 173 ಎಫ್‌ಪಿಸಿ 91, ದಿನಾಂಕ :05-04-93 ರಲ್ಲಿ 20 ಸಾವಿರ ಹೆಕ್ಟೇರ್ ಗೇರು ನೆಡುತೋಪನ್ನು ಗೇರು ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಡಲು ಆದೇಶಿಸಲಾಗಿದೆ.

ಆ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸರ್ಕಾರದ ಆದೇಶವನ್ನು ಮರುಪರಿಶೀಲಿಸಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ದಿ: 5-4-93ರ ಆದೇಶವನ್ನು ಜಾರಿಗೆ ಬರುವಂತೆ ಕೋರಲಾಗಿದೆ.

ಇ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸರ್ಕಾರದ ಆದೇಶವನ್ನು ಕೂಡಲೇ ಜಾರಿಗೆ ತರುವಂತೆ ಆದೇಶಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಆಸ್ಪತ್ರೆಗಳ ಅಭಿವೃದ್ಧಿ

540 - ಶ್ರೀ ಎಂ.ಎಸ್ ಆತ್ಮಾನಂದ (ಮಂಡ್ಯ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯಾ ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?